
ಮತ್ತೆ ಬಂತು ಚಂಪು

ಆನಂದ ಪಾಟೀಲ

ಚಿತ್ರಗಳು : ಕೊಲ್ಲೋಲ್ ಮಜುಂದಾರ್





ISBN 978-81-237-4599-2

ಮೊದಲ ಮುದ್ರಣ : 2005

ಮೊದಲನೆಯ ಮರುಮುದ್ರಣ : 2021 (ಶಕ 1943)

Matte Bantu Champu (*Kannada Original*)

₹ 85.00

ನಿರ್ದೇಶಕರು, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ
ನೆಹರೂ ಭವನ, 5, ಇನ್‌ಸ್ಟಿಟ್ಯೂಶನಲ್ ಏರಿಯಾ, ಫೇಜ್–II
ವಸಂತ್ ಕುಂಜ್, ಹೊಸ ದೆಹಲಿ–110070 ಇವರಿಂದ ಪ್ರಕಟಿತ.
website : www.nbtindia.gov.in

ನೆಹರೂ ಬಾಲ ಪುಸ್ತಕಾಲಯ

ಮತ್ತೆ ಬಂತು ಚಂಪು

ಆನಂದ ಪಾಟೀಲ

ಚಿತ್ರಗಳು:

ಕೊಲ್ಲೋಲ್ ಮಜುಂದಾರ್



nbt.india

एकः सूते सकलम्

ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ

ಸಾವು ಅಂದರೆ ಏನು?

ಚಂಪು ಸತ್ತ ಮೇಲೆ ಅದು ಇಲ್ಲಿಯೇ ಇತ್ತಲ್ಲ? ಆದರೆ ಹಾಗೇ ಬಿದ್ದುಕೊಂಡಿತ್ತು. ಕಾಲು, ಹೊಟ್ಟೆ, ಮುಖ ಯಾವುದೂ ಮಿಸುಕುತ್ತಿರಲಿಲ್ಲ. ಏನಾಯಿತು ಅದಕ್ಕೆ? ಅಜ್ಜಿ ಮೀನುವಿನ ಪ್ರಶ್ನೆಗೆ ಉತ್ತರ ಹೇಳಿದ್ದು 'ಅದು ದೇವರ ಹತ್ತಿರ ಹೋಯಿತು' ಎಂದು. ಅದು ಅಲ್ಲಿ ಹೋದದ್ದು ಹೇಗೆ?ಯಾಕೆ? ಊಹೂಂ, ಅವಳಿಗೆ ಅಪ್ಪ, ಅಮ್ಮ, ಅಜ್ಜಿ ಯಾರೂ ಸರಿಯಾಗಿ ಹೇಳುತ್ತಲೇ ಇಲ್ಲ ಅನಿಸಿತು. ಅಥವಾ, 'ಇವರ್‍ಯಾರಿಗೂ ಗೊತ್ತೇ ಇಲ್ಲ ಅಂತ ಕಾಣಿಸುತ್ತದೆ. ಸುಮ್ಮನೇ ಏನೇನೋ ಹೇಳುತ್ತಾರೆ' ಎಂದುಕೊಂಡಳು ಮೀನು.







ಅಪ್ಪ ಅವರ ಆಫೀಸಿನಿಂದ ಅದ್ಯಾರನ್ನೋ ಜೊತೆಗೆ ಕರೆತಂದಿದ್ದರು. ಅವರು ಎರಡು ಕಾಲ್ನನ್ನೂ ಜೋಡಿಸಿ ತೂಗಾಡಿಸುತ್ತ ಚಂಪೂನ್ನ ತೆಗೆದುಕೊಂಡು ಹೋದರು.

'ಅವರು ಚಂಪು ವನ್ನು ಏನು ಮಾಡುತ್ತಾರೆ? ಬೇಡ ಬೇಡ, ಅವರು ಒಯ್ಯುವು ದು ಬೇಡ.' ಮೀನು. ಜೋರಾಗಿ ಅತ್ತಳು.





ಮೀನು ಶಾಲೆಯಲ್ಲಿ ಪಾಠ ನಡೆಯುವಾಗ, ಮನೆಯಲ್ಲಿ ಊಟಕ್ಕೆ ಕೂತಾಗ, ಹೋಮ್‌ವರ್ಕ್ ಮಾಡುತ್ತಿರುವಾಗ ಚಂಪೂನ ನೆನಪಾಗಿ ಹಾಗೆಯೇ ಕುಳಿತುಬಿಡುತ್ತಾಳೆ...

ಚಂಪು ಬಹಳ ಪುಟಾಣಿ ಇದ್ದಾಗಲೇ ಮನೆಗೆ ಬಂತು. ಅದು ತಾಯಿಯೊಡನೆ ಅಡ್ಡಾಡುತ್ತ ಬಂದಿತ್ತು. ಮೀನು ಚಂಪುವನ್ನು ನೋಡಿ ಬಿಡಲೇ ಇಲ್ಲ. ಮನೆಯಲ್ಲಿ ಅಮ್ಮ, ಅಜ್ಜಿ ಮೊದಲಿಗೆ ಬೇಡವೇ ಅಂದರು. ಆದರೆ ಅಪ್ಪ



ಮೀನೂನ ಪಕ್ಷ ವಹಿಸಿ 'ನಾವು ಸಾಕೋಣ' ಅಂದರು. ಆಗಿಂದ ಟ್ರಾನ್ಸ್‌ಫರ್ ಎಂದು ಬೆಂಗಳೂರು, ಮಡಿಕೇರಿ ಕಂಡುಬಂದಿತ್ತು ಅದು. ಅಪ್ಪನ ಜೊತೆ ವಾಕಿಂಗ್ ಹೋಗುತ್ತಿತ್ತು.



ಮೀನೂನ ಜೊತೆಗಂತೂ ಬಿಡುವಿದ್ದಾಗಲೆಲ್ಲ ಆಟ ಆಡುತ್ತಿತ್ತು. ದಿನವೂ ಶಾಲೆಗೆ ಹೋಗುವಾಗ ಒಂದಿಷ್ಟು ದೂರ ಬಿಡಲು ಬರುತ್ತಿತ್ತು. ಎಷ್ಟೋ ಸಲ ಕದ್ದು ಅಜ್ಜಿಯ ಹಾಸಿಗೆಯಲ್ಲಿ ಬೆಚ್ಚಗೆ ಮಲಗಿ ಹೊಡೆಸಿಕೊಳ್ಳುತ್ತಿತ್ತು.



ಇದ್ದಕ್ಕಿದ್ದ ಹಾಗೆಯೇ ಅದಕ್ಕೆ ಏನೋ ಆಗಿಹೋಯಿತು. ಅಡ್ಡಾಡುವುದನ್ನು ಬಿಟ್ಟು ಸುಮ್ಮನೆ ಮೂಲೆಯಲ್ಲಿ ಬಿದ್ದುಕೊಳ್ಳುತ್ತಿತ್ತು. ತಿನ್ನುವುದಕ್ಕೆ ಏನಿಟ್ಟರೂ ಮುಟ್ಟುತ್ತಿರಲಿಲ್ಲ. ಆಮೇಲೆ ಬಿಕ್ಕುವುದಕ್ಕೆ ಶುರುವಾಯಿತು. ಅಪ್ಪ ಅದನ್ನು ಅರಿವೆಯಲ್ಲಿ ಸುತ್ತಿಕೊಂಡು ದವಾಖಾನೆಗೆ ಕರೆದುಕೊಂಡು ಹೋದರು. ಮೀನು ಕೂಡ ಹೋಗಿದ್ದಳು. ದವಾಖಾನೆಯಿಂದ ಬಂದ ಮೇಲೆ ಒಂದಿಷ್ಟು ಆಹಾರ ತಿನ್ನತೊಡಗಿತು. 'ಕುಂಯ್ ಕುಂಯ್' ಅಂತ ಧ್ವನಿ ತೆಗೆಯತೊಡಗಿತು.





ಮೀನು ಶಾಲೆಯಿಂದ ಬರುವು ದೇ ತಡ ಅದರ ಹತ್ತಿರ ಓಡುತ್ತಿದ್ದಳು. ಅದು ಕಾಲು ಎತ್ತಿ ಎತ್ತಿ ಅವಳ ಕೈಯಲ್ಲಿ ಇಡುತ್ತಿತ್ತು. ಆದರೆ ಅವತ್ತು ಶನಿವಾರ, ಶಾಲೆಗೆ ಒಪ್ಪತ್ತು. ಮೇಲಾಗಿ ಕೊನೆಯ ಪಿರಿಯಡ್‌ನ ಟೀಚರ್ ಬಂದಿರಲಿಲ್ಲವೆಂದು ಮೀನು ಬೇಗನೆ ಓಡಿಬಂದಿದ್ದಳು. ಚಂಪು ವನ್ನು ಬಾಗಿಲ ಮುಂದೆ ತಟ್ಟಿನ ಮೇಲೆ ಮಲಗಿಸಿದ್ದರು. ಅಮ್ಮ, ಅಜ್ಜಿ ಹತ್ತಿರವೇ ಕುಳಿತಿದ್ದರು. ಮೀನು ಹತ್ತಿರ ಬಂದಾಗ ಅದು ಗೋಣೆತ್ತಿ ನೋಡಲೇ ಇಲ್ಲ. 'ಕುಂಯ್ ಕುಂಯ್' ಅಂತ ಧ್ವನಿ ತೆಗೆಯಲೂ ಇಲ್ಲ. ಏನು ಅಂತ ಕಣ್ಣಲ್ಲೇ ಅಮ್ಮನನ್ನು ಕೇಳಿದ್ದಳು ಮೀನು. ಚಂಪು ಸತ್ತು ಹೋಗಿತ್ತು.







ಚಂಪು ವನ್ನು ಮರೆಯುವು ದು ಮೀನುವಿಗೆ ಕಷ್ಟದ ಕೆಲಸವೇ. ಅಮ್ಮ, ಅಜ್ಜಿ ಒಂದೆರಡು ಸಲ ಬೈದೂ ಆಗಿತ್ತು. ಅದರ ಪು ಟ್ಟ ಕಣ್ಣುಗಳು, ಮೆತ್ತಗಿನ ತಲೆ, ಗಿಡ್ಡ ಬಾಲ, ಎಲ್ಲ ಇನ್ನೂ ಕಣ್ಣ ಮುಂದೆ ಕಟ್ಟಿದ ಹಾಗೆಯೇ ಇತ್ತು...


ಮೀನುವಿನ ಕಾಲಿಗೆ ಏನೋ ಮೆತ್ತಗೆ ಹತ್ತಿತು. ಚಂಪು ಇದ್ದಾಗಲೂ ಹೀಗೇ ಆಗುತ್ತಿತ್ತು. ಕಳ್ಳನ ಹಾಗೆ ಯಾವಾಗಲೊ ಬಂದು ಮುದ್ದೆಯಾಗಿ ಕುಳಿತುಬಿಡುತ್ತಿತ್ತು. ಮೀನು ಹಿತ್ತಲಲ್ಲಿ ಕಟ್ಟೆಯ ಮೇಲೆ ಹೋಮ್‌ವರ್ಕ್ ಮಾಡುತ್ತಾ ಕುಳಿತಿದ್ದಳು. ಕಾಲು ಎತ್ತಿಕೊಂಡು ಕೆಳಗೆ ನೋಡಿದಳು.



ನಾಯಿಯೊಂದು ಬಂದು ಕುಳಿತಿದೆ. ಮೀನುವನ್ನೇ ಪಿಳಿಪಿಳಿ ನೋಡುತ್ತಿದೆ. ಬಣ್ಣ ಚಂಪು ವಿನದೇ. ಆದರೆ ಎರಡೂ ಕಿವಿಯ ಬಳಿ ಸ್ವಲ್ಪ ಕಪ್ಪಿದೆ. ಚಂಪು ವಿನಷ್ಟೇ ದೊಡ್ಡದು ಅನ್ನಿಸುತ್ತದೆ. ಎತ್ತರ ಅಷ್ಟೇ.

ಆದರೆ ಚಂಪು ಆಗುವು ದಕ್ಕೆ ಹೇಗೆ ಸಾಧ್ಯ?

ನನ್ನ ಚಂಪೂನೇ ಬೇರೆ. ಪಾಪ ಸತ್ತು ಹೋಯಿತು. ಮೀನು ಆ ನಾಯಿಯ ಕಡೆಯಿಂದ ಮುಖ ತಿರುವಿ ತನ್ನ ಹೋಮ್‌ವರ್ಕ್‌ನಲ್ಲಿ ತೊಡಗಿಕೊಂಡಳು.



ಮೂರು ಪಾತಗಳ ಒಟ್ಟು ಹನ್ನೆರಡು ಉತ್ತರ ಬರೆಯುವು ದಿತ್ತು. ಅಷ್ಟೆಲ್ಲ ಬರೆಯುವ ಹೊತ್ತಿಗೆ ಅವಳ ಬೆನ್ನು ನೋಯತೊಡಗಿತು. ಅಂತೂ ಆಯಿತಲ್ಲ ಅಂತ ಪುಸ್ತಕ ಮಡಿಸಿಕೊಂಡು ಕಟ್ಟೆಯಿಂದ ಕೆಳಗೆ ಜಿಗಿಯುವವಳು, 'ಸಧ್ಯ ಜಿಗಿಯಲಿಲ್ಲ' ಅಂದುಕೊಂಡಳು. ಅಲ್ಲಿ ನಾಯಿ ಕುಳಿತುಕೊಂಡೇ ಇತ್ತು.








ಇದೇಕೆ ಇಲ್ಲಿ ಕುಳಿತುಕೊಂಡಿದೆ? ಚಂಪು ವಿನ ಹಾಗೆ ನನ್ನೊಡನೆ ಆಡಿಕೊಂಡಿರೊ ನಾಯಿಯೇ ಇದು? 'ಹಚ್' ಒಂದು ಸಲ ಅಂದಳು. ನಾಯಿ ಮಾತ್ರ ಮಿಸುಕಾಡಲಿಲ್ಲ.

'ಕೂಡು, ನನಗೇನು' ಅಂದುಕೊಂಡು ಬೇರೆ ಕಡೆಯಿಂದ ಇಳಿದು ಒಳಗೆ ಓಡಿದಳು.

ಅವತ್ತು ಮಧ್ಯಾಹ್ನ ಅಮ್ಮನ ಹತ್ತಿರ ಮಲಗಿ ನಿದ್ರೆ ಮಾಡಿ, ಟಿ.ವಿ.ಯಲ್ಲಿ ಸಿನೆಮಾ ನೋಡಿ, ಅದೇನೂ ಹಿಡಿಸದೆ ಕತ್ತಲೆ ಕವಿಯತೊಡಗಿದಾಗಲೇ ಮೀನು ಹೊರಗೆ ಬಂದದ್ದು. ಬಾಗಿಲಿನಿಂದ ಹೊರಗೆ ಬಂದದ್ದೇ ತಡ ಕಾಯುತ್ತ ಕುಳಿತವರ ಹಾಗೆ ಆ ನಾಯಿ ಓಡಿಯೇ ಬಂತು, ಸಣ್ಣಗೆ 'ವವ್' ಅನ್ನುತ್ತ.



ಅಯ್ಯೋ, ಇದು ಹೋಗಿಯೇ ಇಲ್ಲವೇ? ಇಲ್ಲೇಕೆ ನನ್ನ ಹತ್ತಿರ ಬರುತ್ತಿದೆ ಚಂಪೂನ ಹಾಗೆ. ಇದು ಚಂಪು ಆಗೋದಕ್ಕೆ ಹೇಗೆ ಸಾಧ್ಯ ಅಂದುಕೊಂಡು 'ಹಚ್ ಹಚ್' ಅಂತ ಜೋರಾಗಿಯೇ ಕೂಗಿದಳು. ಅದರ ತಲೆಗೆ ಒಂದೆರಡು ಪಟ್ಟೂ ಹಾಕಿದಳು. ನಾಯಿ 'ಕುಂಯ್' ಅನ್ನುತ್ತ ಸ್ವಲ್ಪ ಹಿಂದೆ ಸರಿಯಿತು, ದೂರದಲ್ಲೇ ಅಡ್ಡಾಡಿತು.



ಮೀನು ಮತ್ತೆ ಒಳಗೆ ಹೋದವಳು ಅದನ್ನು ಮರೆತೇ ಬಿಟ್ಟಳು.

ಮರುದಿನ ಶಾಲೆಗೆ ಹೋಗುವಾಗ ಸುಮ್ಮಿಯೊಡನೆ ಗೇಟು ದಾಟುತ್ತಿದ್ದಂತೆ 'ಕುಂಯ್ ಕುಂಯ್' ಅಂತ ಮತ್ತೆ ಶಬ್ದ ಕೇಳಿಸಿತು. ತಿರುಗಿ ನೋಡಿದರೆ ಅದೇ ನಾಯಿ.



'ಹೇ, ಇದು ನಿಮ್ಮ ಚಂಪೂನ ಹಂಗ... ಅದ ಅಲಾ' ಸುಮ್ಮಿ ಅಂದಳು. ಆದರೆ ಮೀನು ಅದನ್ನು ಒಪ್ಪುವುದಕ್ಕೆ ಸಾಧ್ಯವಿರಲಿಲ್ಲ. ಚಂಪುವಿನ ಇಂಚಿಂಚೂ ಬಲ್ಲಳು ಆಕೆ.

'ಬಾರೆ...' ಅನ್ನುತ್ತ ಸುಮ್ಮಿಯನ್ನು ಎಳೆದುಕೊಂಡು ಆ ನಾಯಿಯ ಕಡೆಗೆ ಲಕ್ಷ್ಯ ಕೊಡದೆ ಓಡಿಹೋದಳು. ನಾಯಿ ಅವರ ಹಿಂದೆಯೇ ಓಡಿತು. ಅದು ಬರುವುದನ್ನು



ನೋಡಿ ಮೀನು ಒಂದೆರಡು ಸಣ್ಣ ಕಲ್ಲು ಎಸೆದಳು. ನಾಯಿ ತುಸು ದೂರ ಓಡಿ ನಿಂತುಕೊಂಡಿತು.

'ದೆದೆದೆ...' ಅಣಕಿಸಿ ಮುಂದೆ ಸಾಗಿದಳು ಮೀನು.

ಸಂಜೆ ಶಾಲೆಯಿಂದ ಬಂದಾಗಲೂ ಹೀಗೆಯೇ ಆಯಿತು. ಈ ಸಲ ಮಾತ್ರ ನಾಯಿ



ನಿಧಾನ ಅಂಜುತ್ತ ಅಂಜುತ್ತ ಹತ್ತಿರ ಬರತೊಡಗಿತ್ತು. ಮೀನು ಅದನ್ನ ಓಡಿಸಲು ತೊಡಗಿದಳು. ಕೈಯಲ್ಲಿ ಕಲ್ಲು ತೆಗೆದುಕೊಂಡಳು. ಕಲ್ಲು ಅಷ್ಟಿಷ್ಟು ದೊಡ್ಡದೇ. ಇನ್ನೇನು ಒಗೆಯಬೇಕು, ಮೀನೂಳ ಅಪ್ಪ ಗೇಟು ಸರಿಸಿ ಒಳಗೆ ಬರುತ್ತಿದ್ದವರು 'ಏಏ' ಅಂತ ಅಲ್ಲಿಂದಲೇ ಕೂಗಿದರು. ಮೀನು ತಡೆಯಬೇಕಾಯಿತು. 'ಅದಕ್ಕ ಯಾಕ ಹೊಡೀತಿ, ಚಂಪೂನ ಹಂಗ ಅಲ್ಲೇನದು?' ಅಪ್ಪ ಅಂದರು.

'ಅದು ಹ್ಯಾಂಗ ಚಂಪೂನಂಗ ಆಗತದ?' ಗಲ್ಲ ಉಬ್ಬಿಸಿದಳು ಮೀನು.

'ಶಾಣ್ಯಾಕಿ ಅಲ್ಲ...' ಅಂತ ಗದ್ದ ನೇವರಿಸಿ, ತಲೆಯ ಮೇಲೆ ಕೈಯಾಡಿಸಿ ಒಳಗೆ ಹೋದರು ಅಪ್ಪ. ಮೀನುವಿನ ಕೈಯಿಂದ ಕಲ್ಲು ಬಿದ್ದಾಗಿತ್ತು. ನಾಯಿ ಅಲ್ಲಿಯೇ ನಿಂತಿತ್ತು.

ಮೀನುವಿನ ಗೆಳತಿಯರು ಮೂರು–ನಾಲ್ಕು ಜನ ಬಂದುದರಿಂದ ಅವಳು ಓಡಿದಳು.







ಪರೀಕ್ಷೆ ಹತ್ತಿರವಾಗಿದ್ದ ದಿನಗಳು ಅವು . ಮೀನು ಈಗ ಆಟಕ್ಕಿಂತ ಓದುವು ದರಲ್ಲಿ ಹೆಚ್ಚು ಸಮಯ ಕಳೆಯುತ್ತಿದ್ದಳು. ನಸುಕಿನಲ್ಲಿ ಐದು ಗಂಟೆಗಾಗಲೇ ಎದ್ದು ಕೂಡುತ್ತಿದ್ದಳು. ಅವತ್ತು ನಸುಕಿನಲ್ಲಿ ಮೀನೂನ ತಲೆದಿಂಬಿನ ಬದಿಯಲ್ಲಿ ಗಡಿಯಾರ ಸರಿಯಾಗಿ ಐದು ಗಂಟೆಗೆ 'ಟ್ರಿನ್' ಅಂತ ಅಲಾರಾಂ ಶಬ್ದ ಪ್ರಾರಂಭಿಸಿತು. ಮೀನು ಎದ್ದು ಅದನ್ನು ನಿಲ್ಲಿಸಿದಳು.



ಮುಖ ತೊಳೆದು ಓದುವು ದಕ್ಕೆ ಟೇಬಲ್ ಹತ್ತಿರ ಬಂದಳು. ಅಪ್ಪ ಆಗಲೇ ಎದ್ದು ಕೋಣೆಯಲ್ಲಿ ಓದುತ್ತ ಕುಳಿತಿದ್ದರು.


ಮೀನು ಪು ಸ್ತಕ ತೆರೆದು ಈಗ ಯಾವು ಯಾವು ದನ್ನು ಓದಿ ಮುಗಿಸುವು ದು ಎಂದು ಲೆಕ್ಕ ಹಾಕಿಕೊಂಡಳು. ಕುರ್ಚಿಯ ಮೇಲೆ ಕಾಲು ಚಾಚಿ ಆರಾಮವಾಗಿ ಒರಗಿಕೊಂಡು ಓದತೊಡಗಿದಳು.

ಕಾಲಿಗೆ ಏನೋ ಮೆತ್ತಗೆ ತಾಕಿತು. ಮೀನುಗೆ ತಕ್ಷಣ ಹಾವಿದ್ದೀತೆ ಎಂದು ಭಯವಾಗಿ ತಟಕ್ಕನೆ ಕಾಲೆಳೆದುಕೊಂಡಳು. ಆಮೇಲೆ ನಿಧಾನ ಕುರ್ಚಿಯಿಂದ ಎದ್ದು ಈ ಕಡೆಗೆ ಬಂದಳು. ಕೆಳಗೆ ಬಗ್ಗಿ ನೋಡಿದಳು. ಅವಳ ಕಾಲಿಗೆ ಮೆತ್ತಗೆ ತಾಗಿ ಭಯ ಉಂಟುಮಾಡಿದ್ದು ಮತ್ತೇನು ಅಲ್ಲ, ಅದೇ ನಾಯಿ.





ಅವಳಿಗೆ ಒಮ್ಮೆಲೇ ಸಿಟ್ಟು ಬಂತು. 'ತಡಿ ನಿನಗೆ ಮಾಡ್ತೀನಿ' ಅಂತ ಮನಸ್ಸಿನಲ್ಲೇ ಅಂದುಕೊಳ್ಳುತ್ತ ಅಡುಗೆ ಮನೆಗೆ ಹೋಗಿ ಮೂಲೆಯಲ್ಲಿನ ಅರಿವೆ ಒಣಹಾಕುವ ಕೋಲು ತಂದಳು. ತಂದವಳೇ ಅದಕ್ಕೆ ತಿಳಿಯದಂತೆ ಹಿಂದಿನಿಂದ ಹೋಗಿ ಜೋರಾಗಿ ಹೊಡೆದೂ



ಬಿಟ್ಟಳು. ಅನಿರೀಕ್ಷಿತವಾದ ಈ ಏಟಿನಿಂದ ನಾಯಿ ತತ್ತರಿಸಿ ಹೋಯಿತು. ದೊಡ್ಡ ಧ್ವನಿ ತೆಗೆದು 'ಕುಂಯ್ ಕುಂಯ್' ಎಂದು ಒದರಿತು. ಏಟು ಬಲವಾಗಿಯೇ ಬಿದ್ದಿತ್ತು.







ಅದರ ಧ್ವನಿಗೆ ಅಮ್ಮ, ಅಜ್ಜಿ ಗಡಬಡಿಸಿ ಎದ್ದು ಬಂದರು. ಅಪ್ಪ ಆಗಲೇ ಓಡಿ ಬಂದಾಗಿತ್ತು.

ನಾಯಿ ಬಾಗಿಲಿನ ಹತ್ತಿರ ಹೋಗಿ ನಿಂತಿತ್ತು. ಅಪ್ಪ ತಕ್ಷಣವೇ ಮೀನುವಿಗೆ ಬೈದರು, 'ಏನಾಗೇದ ನಿನಗ, ಮೈಮ್ಯಾಲ ಎಚ್ಚರ ಅದನೋ ಇಲ್ಲೊ.'

'ಈ ನಾಯಿ ಒಳಗ ಹ್ಯಾಂಗ ಬಂತು?' ಅಮ್ಮ ಅಚ್ಚರಿಯಿಂದ ಕೇಳಿದರು.

'ಹಂಗ ಹೊಡೀತಾರೇನವಾ, ನಿಮ್ಮಪ್ಪನ್ನ ಕರೆದಿದ್ರ ಹೊರಗ ಓಡಿಸತಿದ್ದಾ' ಅಜ್ಜಿ ಅಂದಳು.

ಮೀನು ಮಾತ್ರ ಏನೂ ಮಾತನಾಡದೆ ಹಾಗೆ ನಿಂತಿದ್ದಳು.

'ತಾನು ತಪ್ಪು ಮಾಡಿದೆನೆ? ಹೊಡೆಯಬಾರದಾಗಿತ್ತೆ? ಆ ನಾಯಿ ಒಳಗೆ ಯಾಕೆ ಬಂದು ಕುಳಿತಿತ್ತು?' ಎಂದೆಲ್ಲ ಯೋಚನೆ ಆಕೆಯ ತಲೆಯ ತುಂಬ ತುಂಬಿದ್ದವು .

ಅಪ್ಪ ಬಾಗಿಲು ತೆರೆದರು. ಈ ನಾಯಿ ಹೊರಗೆ ಹೋಗಲು ಕಾಯುತ್ತಿದ್ದಂತೆ ಸರಕ್ಕನೆ ನುಸುಳಿಕೊಂಡಿತು.

ಮೀನು ಮತ್ತೆ ಓದುತ್ತ ಕುಳಿತಳು. ಆದರೆ ಅವಳ ಮನಸ್ಸು ಮಾತ್ರ ಅಲ್ಲಿ ಉಳಿಯುತ್ತಿಲ್ಲ. ಆ ನಾಯಿಯ 'ಕುಂಯ್' ಶಬ್ದವೇ ತಲೆಯಲ್ಲಿ ತುಂಬಿಕೊಂಡಿತ್ತು. ಈಗ ಮೂರು–ನಾಲ್ಕು ದಿನದಿಂದ ಅದು ತನ್ನ ಹತ್ತಿರ ಸುಳಿದಾಡುತ್ತಿದ್ದುದು,





ತಾನು ಅದನ್ನ ಸ್ವಲ್ಪವೂ ಸಹಿಸದೇ ಓಡಿಸುತ್ತಿದ್ದುದು ಎಲ್ಲ ಒಂದೊಂದಾಗಿ ನೆನಪಾಗತೊಡಗಿದವು. ಚಂಪೂನ ಹಾಗೆಯೇ ಇದೂ ಒಂದು ನಾಯಿಯಲ್ಲವೆ? ನಾನು ಯಾಕೆ ಹಾಗೆ ಮಾಡಿದೆ?

ಅಷ್ಟರಲ್ಲಿ ಹೊರಗೆ ಏನೋ ಶಬ್ದ. ಹೌದು, ಮಳೆ ಸುರಿಯತೊಡಗಿದೆ. ಇದ್ದಕ್ಕಿದ್ದ ಹಾಗೆ ಮಳೆ ಬಂದುಬಿಟ್ಟಿತ್ತು. ತಟಕ್ಕನೆ ಮೀನುವಿಗೆ ನಾಯಿ ಈಗ ಎಲ್ಲಿದ್ದೀತು ಅನಿಸಿತು.





ಕಿಟಕಿಯ ಬಳಿಗೆ ಓಡಿ ಬಾಗಿಲು ತೆರೆದಳು. ಹೊರಗೆ ಇನ್ನೂ ನಸುಕು. ಹೊರಗಿನ ಲೈಟು ಹಾಕಿರಲಿಲ್ಲ. ಲೈಟು ಹಾಕಿ ಬಂದಳು. ಬೆಳಕಿನಲ್ಲಿ ಅಲ್ಲಿ ಇಲ್ಲಿ ನೋಡತೊಡಗಿದಳು. ಸ್ವಲ್ಪ ಹೊತ್ತಿಗೆಲ್ಲ ನಾಯಿ ಕಂಡಿತು. ಮಲ್ಲಿಗೆ ಗಿಡದ ಕೆಳಗೆ ಚಳಿಯಲ್ಲಿ ಮುದ್ದೆಯಾಗಿ ಕುಳಿತುಕೊಂಡಿತ್ತು. ಮಳೆಯ ಹನಿಗಳು ಸಾಕಷ್ಟು ಸಿಡಿಯುತ್ತಿದ್ದವು. ಮೀನುವಿಗೆ ಈಗ





ತಡೆಯುವುದಾಗಲಿಲ್ಲ. ಅವಳ ಕಣ್ಣಲ್ಲಿ ಸಣ್ಣಗೆ ನೀರು ಬಂದಿತ್ತು. ಬಾಗಿಲು ತೆರೆದವಳೇ ಮಳೆಯಲ್ಲಿಯೇ ಓಡಿದಳು. ನಾಯಿ ಇವಳು ಹತ್ತಿರ ಬಂದಂತೆ ಮುದುರಿಕೊಂಡು ಹಿಂದೆ ಸರಿಯತೊಡಗಿತು. ಆದರೆ ಮೀನು ಬಿಡಲಿಲ್ಲ. ಅಲ್ಲೆಲ್ಲ ಕೆಸರಾಗಿದ್ದರೂ ಕೈ ಹಾಕಿ ನಾಯಿಯನ್ನು ಎತ್ತಿ ಎದೆಗೆ ಒತ್ತಿ ಹಿಡಿದುಕೊಂಡು ಈ ಕಡೆಗೆ ಬಂದಳು.

ಎದುರಿಗೆ ಅಪ್ಪ ನಿಂತುಕೊಂಡಿದ್ದರು. 'ಗುಡ್ ಗರ್ಲ್' ಎಂದರು.

ಮೀನುವಿನ ಬಟ್ಟೆಯೆಲ್ಲ ತೋಯ್ದು ಹೋಗಿತ್ತು. ತಲೆ ತೋಯ್ದು ನೀರು ತೊಟ್ಟಿಕ್ಕುತ್ತಿತ್ತು. ಮುಖದ ಮೇಲೆ ನೀರು ಒಂದೇ ಸಮನೆ ಸಿಡಿಯುತ್ತಿದ್ದರೂ ಅಪ್ಪನನ್ನು ನೋಡಿ ಮೀನು ನಕ್ಕಳು. ಅಪ್ಪ ಅವಳ ಬೆನ್ನ ಮೇಲೆ ಕೈಯಾಡಿಸಿದರು.





'ಅಪ್ಪಾ, ಇದನ್ನೂ ನಾವು ಚಂಪು ಅಂತ, ಕರಿಯೂಣ?'

'ಓ.ಕೆ., ಹಂಗಾರ ಚಂಪು ಮತ್ತೆ ಬಂತು.' ಇಬ್ಬರೂ ನಕ್ಕರು.

ನಾಯಿ, ಅಲ್ಲ, 'ಚಂಪು ' ಮೀನುವನ್ನೇ ನೋಡುತ್ತಿತ್ತು. ಮುಖವನ್ನು ಅವಳ ಗಲ್ಲಕ್ಕೆ ಒತ್ತಿತು. ಅದಕ್ಕೀಗ ಖುಷಿಯಾದ ಹಾಗಿತ್ತು.





Printed at: Rakmo Press Pvt. Ltd., Greater Noida

nbt.india

एकः सूते सकलम्

ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ

₹ 85.00

ISBN 812374599-0

9788123745992

21221764

Laut Aaya Champu (Kannada)

